ಪ್ರಧಾನ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ

ಸಿಸಿ ನಂಬ್ರಃ 8/18
ಸಿಡಬ್ಲ್ಯೂ- 16
ಪಿಡಬ್ಲ್ಯೂ- 8

| | | |
|---|---|---|
| ಸಾಕ್ಷಿದಾರರ ಹೆಸರು | : | ಪರಮೇಶ್ವರ ಆರ್ ಗುಣಾಗರ |
| ತಂದೆಯ ಹೆಸರು | : | ರಾಮ ಗುಣಾಗಾರ |
| ಪ್ರಾಯ | : | 64 ವರ್ಷ |
| ಉದ್ಯೋಗ | : | ನಿವೃತ್ತ ಪೊಲೀಸ್ ಅಧಿಕಾರಿ |
| ವಾಸ | : | ಕಮಟಾ |

ದಿನಾಂಕಃ **19 - 11-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ನಾನು ದಿನಾಂಕ 21/10/2017 ರಿಂದ 25/09/2019 ರವರೆಗೆ ಬೈಂದೂರು ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತೇನೆ.

2. ದಿನಾಂಕ 21/07/2017 ರಂದು ನಾನು ಬೈಂದೂರು ವೃತ್ತ ನಿರೀಕ್ಷನಾಗಿ ಪ್ರಭಾರ ವಹಿಸಿಕೊಂಡು ಈ ಪ್ರಕರಣದ ಕಡತವನ್ನು ಚಾಸಾ 15 ರವರಿಂದ ಸ್ವಿಕರಿಸಿ ಪರಿಶೀಲಿಸಿ ದಿನಾಂಕ 26/10/2017 ರಂದು ಈ ಪ್ರಕರಣದಲ್ಲಿ ಮೃತ ಪ್ರವೀಣ ಜಿ ರವರ ಮರಣೋತ್ತರ ಪರಿಕ್ಷಾ ವರದಿಯನ್ನು ಆಲೂರು ಪ್ರಾಥಮಿಕ ಅರೋಗ್ಯ ಕೇಂದ್ದಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಪಿ ಎಮ್ ವರದಿ ಈಗಾಗಲೇ ಆರೋಪಿ ಪರ ವಕೀಲರ ಸಮ್ಮತಿಯ ಮೇರೆಗೆ ನಿಶಾನೆ ನಿಪಿ 9 ಅಂತಾ ಗುರುತಿಸಲಾಗಿದ್ದು ಸಾಕ್ಷ್ಯಸಹಿಯನ್ನು 9 ಎ ಅಂತಾ ಗುರುತಿಸಲಾಗಿಯಿತು. ಪ್ರಕರಣದ ತನಿಖೆಯು ಪೂರ್ಣಗೊಂಡಿದ್ದು, ಸಾಕ್ಷ್ಯದಾರಗಳು ಆರೋಪಿತನ ವಿರುದ್ಧ ಇದ್ದುದರಿಂದ ಆರೂಪಿತನ ವಿರುದ್ದ ದೋಷಾರೊಪಣಾ ಪಟ್ಟಿ ಸಲ್ಲಿಸಿರುತ್ತೇನೆ.

ಪಾಟಿ ಸವಾಲುಃ ಆರೋಪಿತರ ಪರ ಆರ್ ಕೆ ಎಮ್.ವಕೀಲರಿಂದ

1. ನಾನು ತನಿಖೆಯ ಸಮಯದಲ್ಲಿ ತಕ್ಷೀರು ಸ್ಥಳಕ್ಕೆ ಬೇಟಿ ಕೊಟ್ಟರುವುದಿಲ್ಲ. ಯಾವುದೇ ಸಾಕ್ಷಿದಾರರುಗಳ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುವುದಿಲ್ಲ,

ಅಪಘಾತವಾಗುವ ಸಮಯಲ್ಲಿ ಬಸ್ಸಿನಲ್ಲಿ ಪ್ರಯಾಣಿಕರಿದ್ದರು. ಸದರಿ ಬಸ್ಸಿ ನಲ್ಲಿ ಎಷ್ಟು ಜನ ಪ್ರಯಾಣಿಕರಿದ್ದರು ಎಂದರೇ ಸಾಕ್ಷಿ ದಾಖಲೆಗಳನ್ನು ತಿರುವು ಹಾಕಿ ಉತ್ತರಿಸದೇ ಸುಮ್ಮನೆ ನಿಂತಿರುತ್ತಾರೆ. ನನ್ನ ಹಿಂದಿನ ತನಿಖಾಧಿಕಾರಿ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಯಾವುದೇ ಪ್ರಯಾಣಿಕರನ್ನು ತನಿಖೆ ಮಾಡಿ ಸಾಕ್ಷಿದಾರರನ್ನಾಗಿ ಸಾಕ್ಷ್ಯಾ ಪಟ್ಟಿಯಲ್ಲಿ ಹೆಸರಿಸಿರುವುದಿಲ್ಲ ಎಂದರೆ ಸರಿ. ಮೃತನ ಚಾಲನ ಅನುಜ್ಞಾ ಪತ್ರವನ್ನು ನಾನು ವಶಪಡಿಸಿಕೊಂಡಿರುವುದಿಲ್ಲ. ಆತನಿಗೆ ವಾಹನವನ್ನು ಚಾಲನೆ ಮಾಡಲು ವಾಹನ ಚಾಲನಾ ಅನುಜ್ಞಾ ಪತ್ರ ಇದ್ದ ಬಗ್ಗೆ ನನ್ನ ಬಳಿ ಮಾಹಿತಿ ಹಾಗೂ ದಾಖಲೆಗಳು ಇರುವುದಿಲ್ಲ.

2.ಬಸ್ಸಿನ ನೊಂದಣಿ ಮಾಲೀಕರು ಯಾರು ಎಂದರೆ ಸಾಕ್ಷಿ ಎಸ್.ಆರ್.ಎಸ್. ಟೂರಿಸ್ಟ್ ಮ್ಯಾನೇಜರ್ ಎಂದು ನುಡಿಯುತ್ತಾರೆ. ಆ ಸಂಸ್ಥೆಯಡಿ ಹಲವಾರು ಬಸ್ಸುಗಳು ಇದ್ದು ಹಲವಾರು ಜನ ಚಾಲಕರು ಇರುತ್ತಾರೇ ಎಂದರೆ ಸರಿ. ಆರೋಪಿತ ಕೋಟೇಶ್ವರ ಕುಂದಾಪುರ ಗ್ರಾಮದವರು. ಪುನಃ ಸಾಕ್ಷಿ ಪಿರ್ಯಾದುದಾರ ಕೋಟೇಶ್ವರ, ಕುಂದಾಪುರ ಗ್ರಾಮದವರು ಎಂದು ನುಡಿಯುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತನೆ ಬಸ್ಸಿನ ಚಾಲಕನಾಗಿದ್ದ ಎಂಬುದರ ಬಗ್ಗೆ ಯಾವ ಸಾಕ್ಷ್ಯಾದಾರರು ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹಿಂದಿನ ತನಿಖಾಧಿಕಾರಿಗಳು ಪ್ರಕರಣದ ಮಹಜರು ಹಾಗೂ ಹೇಳಿಕೆಗಳನ್ನು ಸರಿಯಾಗಿ ತನಿಖೆ ಮಾಡದೇ ಸದರಿ ದಾಖಲೆಗಳನ್ನು ಸೃಷ್ಟಿ ಮಾಡಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಯಾವುದೇ ತನಿಖೆ ಮಾಡದೆ ಯಾಂತ್ರಿಕವಾಗಿ ಆರೋಪಿಯದ್ದು ಯಾವುದು ತಪ್ಪು ಇಲ್ಲ ಎಂದು ಕಂಡು ಬಂದಿದ್ದರೂ ಸಹ ಆತನ ವಿರುದ್ದ ಸುಳಳು ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

3.ಮೃತ ವ್ಯಕ್ತಿ ವಾಹನ ಚಾಲನ ಅನುಜ್ಞಾ ಪತ್ರವನ್ನು ಹೊಂದದೇ ವಾಹನವನ್ನು ಅಡ್ಡಾದಿಡ್ಡಿ ಚಲಾನೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಹಿಂದಿನ ತನಿಖಾಧಿಕಾರಿಗಳು ಬಸ್ಸಿನ ಆರ್.ಸಿ. ಮಾಲಿಕರಿಗೆ ನೋಟಿಸ್ಸು ಕೊಡದೆ ಬೇರೆ ಯಾರೋ ಮ್ಯಾನೇಜರಗೆ ನೋಟಿಸು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಮ್ಯಾನೇಜರಿಗೆ ನೋಟಿಸ್ಸು ಕೊಟ್ಟಿ ರುತ್ತಾರೆ ಎಂದು ಉತ್ತರಿಸಿ ಪುನಃ ಜಿ ಪಿ ಎ ಹೊಲ್ಡರಗೆ ನೋಟಿಸು ಕೊಟ್ಟಿರುತ್ತಾರೆ ಎಂದು ನುಡಿಯತ್ತಾರೆ. ಅಪಘಾತದ ಸಮಯದಲ್ಲಿ ಆರೋಪಿತನೇ ಬಸ್ಸಿನ ಚಾಲಕನಾಗಿದ್ದನು ಎಂಬುವುದರ ಬಗ್ಗೆ ಯಾರು ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನೇ ಬಸ್ಸಿ ನ ಚಾಲಕ ಎಂದು ಮಾಹಿತಿ ಕೊಟ್ಟವರಿಗೆ ಆ ರೀತಿ ಮಾಹಿತಿ ಕೊಡಲು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಬಸ್ಸಿ ನ ಜಿ.ಪಿ.ಎ ಮಾಲಿಕ ಮಾಹಿತಿ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಸದರಿ ಜಿ.ಪಿ.ಎ ನಲ್ಲಿ ವಾಹನವನ್ನು ಬಿಡುಗಡೆ ಮಾಡಿಕೊಳ್ಳಲು ಮಾತ್ರ ಅಧಿಕಾರ ಕೊಟ್ಟಿರುತ್ತಾರೆ ಎಂದರೆ ಸರಿ. ಆರೋಪಿತನೇ ಆ ಬಸ್ಸಿ ನ ಚಾಲಕನಾಗಿದ್ದನು ಎಂಬುವುದರ ಬಗ್ಗೆ ಮಾಹಿತಿ ಕೊಡಲು ಆತನಿಗೆ ಅಧಿಕಾರವಿರಲಿಲ್ಲ ಎಂದರೆ ಸರಿ.ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಮಾಹಿತಿ ಸುಳ್ಳು ಎಂದರೆ ಸರಿಯಲ್ಲ. ನಾನು

ಸರಿಯಾಗಿ ತನಿಖೆ ಮಾಡದೇ ಆರೋಪಿತನದ್ದು ತಪ್ಪು ಇಲ್ಲ ಅಂತ ಗೊತ್ತಿದ್ದರೂ ಸಹ ಆರೋಪಿತನ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ